ಮತ್ತು ಮುಖ್ಯಮಂತ್ರಿಗಳು ಇದರ ಬಗ್ಗೆ ಸಮಾಲೋಚನೆ ಮಾಡುತ್ತೇವೆ. ಆದರೆ ಎಷ್ಟು ಭಾಗ ಅರಣ್ಯ ಗ್ರಾಮ ಸಮಿತಿಗಳಿಗೆ ಕೊಡಬೇಕು ಉಳಿಕೆ ಇರುವುದನ್ನು ಕೆಸಿಡಿಸಿಗೆ ಕೊಡಬೇಕೆಂಬ ನಿಲುವನ್ನು ಸದಸ್ಯರಾದ ಕಾನಡೆಯವರು ನಿನ್ನೆ ಪ್ರಸ್ತಾಪಿಸಿದಾಗ ಉತ್ತರ ಕೊಟ್ಟಿದ್ದೇನೆ. ಇದು ಹೊಸದಾಗಿ ಪ್ರಾರಂಭವಾಗಿರುವುದರಿಂದ ಬರುವ ದಿನಗಳಲ್ಲಿ ಎಷ್ಟು ಜವಾಬ್ದಾರಿ ಮತ್ತು ಎಷ್ಟು ಪ್ರಮಾಣದ ಜಮೀನನ್ನು ಕೊಡಬೇಕೆಂದು ನಿರ್ಣಯಿಸಿ ಕೊಡುತ್ತಿದ್ದೇವೆ. ಆದ್ದರಿಂದ ಇವತ್ತು ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಆ ಸಮಿತಿಗಳು ಕಾರ್ಯಗತವಾಗಿರುವ ಜೊತೆಗೆ ಕರ್ನಾಟಕದ ಇತರ ಅನೇಕ ತಾಲ್ಲೂಕುಗಳಲ್ಲಿ ಆ ಸಮಿತಿಗಳನ್ನು ಮಾಡಲು ಸರ್ಕಾರ ನಿರ್ಧರಿಸಿ ಈಗಾಗಲೇ ಚಾಲನೆಯಲ್ಲಿದೆ. ಆ ಗ್ರಾಮ ಸಮಿತಿ ಎಲ್ಲೆಲ್ಲಿ ಮಾಡಿದ್ದೇವೋ ಅಲ್ಲಿರುವ ಪ್ರದೇಶಗಳನ್ನು ಆ ಸಮಿತಿಗೇ ಕೊಟ್ಟು ಉಳಿದದ್ದನ್ನು ಗೇರು ನೆಡುತೋಪನ್ನು ಕೆಸಿಡಿಸಿ ಗೆ ಕೊಡಲು ಸರ್ಕಾರ ಆಲೋಚನೆ ಮಾಡಿದೆ. ಇದರಿಂದ ಅರಣ್ಯ ಸಮಿತಿಗೆ ಯಾವ ತೊಂದರೆಯಾಗದಂತೆ ಆದರ ಜವಾಬ್ದಾರಿಯನ್ನು ಅವರಿಗೆ ವಹಿಸಿ ಕೊಡುತ್ತೇವೆ.

ಶ್ರೀ ಕೆ. ಸೋಮಪ್ಪ ಸುವರ್ಣ.—ಕೆಲವು ಅರಣ್ಯ ಭಕ್ಷಕರು ರಕ್ಷಕರ ಹೆಸರಲ್ಲಿ ಸಮಿತಿಗೆ ಸೇರಿ ಕೊಂಡಿದ್ದಾರೆ. ಯಾರಿಗೆ ಅರಣ್ಯವರ ಕದ್ದಿದ್ದಕ್ಕೆ ಶಿಕ್ಷೆಯಾಗಿದೆಯೋ ಅಥವಾ ದಂಡನೆ ಕೊಟ್ಟಿದ್ದಾರೋ ಅಂಥವರನ್ನು ಎಷ್ಟು ಮಾತ್ರಕ್ಕೂ ಆ ಸಮಿತಿಯಲ್ಲಿ ಸೇರಿಸಿಕೊಳ್ಳಬೇಡಿ. ಏಕೆಂದರೆ ಅರಣ್ಯವನ್ನು ರಕ್ಷಿಸುವ ನೆಪದಲ್ಲಿ ಆ ಸಮಿತಿಗೆ ಸೇರಿಸಿಕೊಂಡು ಅರಣ್ಯ ಭಕ್ಷಣೆ ಮಾಡುವ ಕಾರ್ಯಜಾಲ ಆಗಬಾರದು. ಅರಣ್ಯ ಇಲಾಖೆಗೆ ಮೋಸ ಮಾಡಿದಂತಹ ಜನರನ್ನು ಸದಸ್ಯರಾಗಿ ಸೇರಿಸಿಕೊಳ್ಳಬೇಡಿ. ಅವರಿಗೆ ಆ ಅಧಿಕಾರ ಕೊಡುವುದು ಬೇಡ ಎಂದು ಸೂಚಿಸಬಯಸುತ್ತೇನೆ.

ಶ್ರೀ ಎಂ. ಪಿ. ಕೇಶವಮೂರ್ತಿ.—ಸದಸ್ಯರ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಪರಿಶೀಲಿಸುತ್ತೇನೆ.

(ಗ) ನಾಗರಹೊಳೆ ಅರಣ್ಯದಲ್ಲಿ ಬೆಂಕಿ ಬಿದ್ದ ಬಗ್ಗೆ ಸಿ.ಓ.ಡಿ. ವರದಿಯ ಮೇಲೆ ಕೈಗೊಂಡ ಕ್ರಮಗಳ ಬಗ್ಗೆ

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ, ಈ ಸದನ ಪ್ರಾರಂಭವಾದಾಗಿನಿಂದ ನಾನು ನಾಗರಹೊಳೆ ಬೆಂಕಿ ಬಿದ್ದಿರುವ ಪ್ರಕರಣ, ಬಂಡೀಪುರ ಅಭಯಾರಣ್ಯಕ್ಕೆ ಬೆಂಕಿ ಬಿದ್ದಿರುವ ಪ್ರಕರಣ, ೧೯೨೨ರಲ್ಲಿ ಬೆಂಕಿ ಬಿದ್ದಾಗ ಸಿಒಡಿ ತನಿಖೆಯಾಯ್ತು, ಆ ಸಿಒಡಿ ತನಿಖೆ ವರದಿಯೆನಾಯ್ತು ಮತ್ತು ಈ ಅಭಯಾರಣ್ಯಗಳನ್ನು ರಕ್ಷಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? ನಾಲ್ಕೂವರೆ ಸಾವಿರ ಎಕರೆ ಪ್ರದೇಶದಲ್ಲಿ ಬೆಂಕಿ ಬಿದ್ದು ಬಹಳ ದೊಡ್ಡ ಅನಾಹುತ ನಡೆದಿದೆ. ಇದರ ಬಗ್ಗೆ ಸರ್ಕಾರದ ಕ್ರಮದ ಬಗ್ಗೆ ಸುದೀರ್ಘವಾಗಿ ನಾವು ಚರ್ಚೆ ಮಾಡಿದೆವು, ಮಾನ್ಯ ಸಚಿವರು ಉತ್ತರ ಕೊಡಲು ತಯಾರಿದ್ದರು, ಅದೇನೋ ಆ ಸಂದರ್ಭದಲ್ಲಿ ಕೊಡುವುದಕ್ಕಾಗಲಿಲ್ಲ. ಆದ್ದರಿಂದ ತನ್ಮೂಲಕ ಅವರನ್ನು ಕೇಳುತ್ತಿದ್ದೇವೆ. ೪ ಸಾವಿರ ಎಕರೆ ಪ್ರದೇಶದಲ್ಲಿ ಬೆಂಕಿ ಬಿದ್ದಿದ್ದಕ್ಕೆ ಕೈವಾಡ ಯಾವುದು ? ಇದರ ಹಿಂದೆ ಇರುವ ಶಕ್ತಿಗಳಾವುವು ? ಇದು ೧೯೨೨ರಲ್ಲಿ ಆಯಿತು ಮತ್ತು ಈಗಲೂ ಆಯಿತು, ಎರಡೆರಡು ಸರ್ಕಾರ್ಕೂ ಹೀಗೆ ಬೆಂಕಿ ಬೀಳುತ್ತಿದ್ದರೆ ಇದರ ಹಿಂದೆ ಯಾರೋ ಇರಬೇಕು ? ಅದಕ್ಕೆ ಏನು ಪತ್ತೆ ಹಚ್ಚಿದ್ದೀರಿ ಏನು ಕ್ರಮ ತೆಗೆದುಕೊಂಡಿದ್ದೀರಿ ? ೧೯೨೨ರಲ್ಲಿ ಸಿಒಡಿ ತನಿಖೆ ನೇಮಿಸಿದಿರಿ, ಆ ವರದಿ ಸರ್ಕಾರಕ್ಕೆ ಬಂದಿದೆಯೆಂದು ಹೇಳಿದರು ? ಆ ವರದಿಯ ಸಾರಾಂಶವೇನು ? ಆ ವರದಿ ಆಧಾರದ ಮೇಲೆ ತಾವೇನು ಕ್ರಮ ತೆಗೆದುಕೊಂಡಿದ್ದೀರಿ. ಇದು ಇಂದಿನ ಪ್ರಮುಖ ಪ್ರಶ್ನೆ. ತಾವು ಅರಣ್ಯ ಇಲಾಖೆ ಸಚಿವರು ಇದರ ಬಗ್ಗೆ ಬೆಳಕು ಚೆಲ್ಲುತ್ತೀರಿ ಎಂದು ತಿಳಿದಿದ್ದೇನೆ. ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಏನು ಕ್ರಮ ತೆಗೆದುಕೊಂಡಿದೆ ಮತ್ತು ತಪ್ಪಿತಸ್ಥರಿಗೆ ಏನೇನು ಶಿಕ್ಷೆ ವಿಧಿಸಿದ್ದೀರಿ ಮುಂದೆ ಇಂಥ ಕ್ರಮಾವಾಗದ ರೀತಿ ಏನು ಯೋಜನೆ ಹಾಕಿಕೊಂಡಿದ್ದೀರೆಂಬುದನ್ನು ತಿಳಿಸಬೇಕು.

ಶ್ರೀ ಎಂ. ಪಿ. ಕೇಶವಮೂರ್ತಿ (ಅರಣ್ಯ ಸಚಿವರು).—೧೯೨೨ರಲ್ಲಿ ನಾಗರಹೊಳೆಗೆ ಬೆಂಕಿ ಬಿದ್ದ ಕಾರಣ ಅದು ಉದ್ದೇಶಪೂರ್ವಕವಾಗಿ ಕೆಲವು ಜನ ಮಾಡಿದ್ದಾರೆಂದು ಸಿಒಡಿ ವರದಿ ಬಂದಿದೆ, ಆ ಬಗ್ಗೆ ಯಾವರೀತಿ ಮಾಡಬೇಕೆಂದು ಇಲಾಖೆಯಲ್ಲಿ ಚರ್ಚೆ ನಡೆಯುತ್ತಿದೆ. ಈಗ ಬೆಂಕಿ ಬಿದ್ದಿರುವುದು ಉದ್ದೇಶಪೂರ್ವಕ ಅಲ್ಲ, ಇದು ಆಕಸ್ಮಿಕವಾಗಿ ಬಿದ್ದಿರುವುದು. ಮಾನ್ಯ ವಾಟಾಳ್ ನಾಗರಾಜರು ಹೇಳಿದಂತೆ ನಾಗರಹೊಳೆಯಲ್ಲಿ ೨೦೦೬ ಎಕರೆಗೆ ಮಾತ್ರ ಬೆಂಕಿ ಬಿದ್ದಿತ್ತು ಆದು ಗ್ರೌಂಡ್‌ಫ್ಲೋರ್

ಮಟ್ಟದಲ್ಲಿತ್ತು ಆಷ್ಟೊಂದು ಲಂಕ್ಷನೇನೂ ಆಗಿರಲಿಲ್ಲ. ಮತ್ತು ಬಂಡೀಪುರದಲ್ಲಿ ಸ್ವಲ್ಪ ಆಗಿತ್ತು, ಎರಡು ಭಾಗದಿಂದ ೪ ಸಾವಿರ ಎಕರೆ ಆಗಿದೆ, ಈಗಾಗಲೇ ಅದನ್ನು ತಡೆಗಟ್ಟಿದ್ದೇವೆ, ಹೆಚ್ಚಿನ ಲಂಕ್ಷಾನೇನೂ ಆಗಿಲ್ಲ. ನಾನೂ ಸ್ಥಳಕ್ಕೆ ಭೇಟಿ ಕೊಟ್ಟಿದ್ದೆ, ಮಾನ್ಯ ನಾಗರಾಜು ಕೂಡ ಹೋಗಿದ್ದಾರೆ, ಮತ್ತು ವಿರೋಧಪಕ್ಷದ ನಾಯಕರು ಹೋಗಿದ್ದಾರೆ. ಆದರೆ ಪತ್ರಿಕೆಗಳಲ್ಲಿ ಎಷ್ಟು ಲಂಕ್ಷಾನಾಗಿದೆ ಎಂದು ಬಂದಿದೆ ನಿಜವಾಗೂ ಆಷ್ಟಾಗಿಲ್ಲ. ನಾನು ಖುದ್ದಾಗಿ ೯ ಮತ್ತು ೧೦ನೇ ತಾರೀಖು ಸ್ಥಳ ಪರಿಶೀಲನೆ ಮಾಡಿದ್ದೇನೆ, ಒಂದು ರೇಂಜಿನಲ್ಲಿ ಬೆಂಕಿ ಬಿದ್ದಾಗ ಕೇವಲ ಒಂದು ಗಂಟೆಯಲ್ಲಿ ಆರಿಸಿದ್ದಾರೆ ಈಗಾಗಲೇ ೩೦೦-೪೦೦ ಜನರನ್ನು ಬೆಂಕಿ ಆರಿಸಲಿಕ್ಕೆಂದು ಕೂಲಿಗೆ ತೆಗೆದುಕೊಂಡಿದ್ದೇವೆ. ಮಾರ್ಚ್ ಏಪ್ರಿಲ್ ತಿಂಗಳಲ್ಲಿ ಬೇಸಿಗೆ ಕಾಲದಲ್ಲಿ ಕೆಲವರು ಉದ್ದೇಶಪೂರ್ವಕವಾಗಿ ಇಡುತ್ತಾರೋ ಅಥವಾ ಹೇಗೋ ಬೆಂಕಿ ಬೀಳುತ್ತದೋ ಅದನ್ನು ತಡೆಗಟ್ಟಿ ಹೆಚ್ಚಿನ ಲಂಕ್ಷಾನು ಆಗದಂತೆ ಮಾಡಲಾಗಿದೆ. ಆದರೆ ೯ರಲ್ಲಿ ಬೆಂಕಿ ಬಿದ್ದದ್ದು ಉದ್ದೇಶಪೂರ್ವಕವಾಗಿ ಆದದ್ದು ಎಂದು ವರದಿ ಬಂದಿದೆ. ಆ ವರದಿಯನ್ನು ಆಧರಿಸಿ ತಪ್ಪಿತಸ್ಥರ ವಿರುದ್ಧ ಪೋಲೀಸ್ ಮೊಕದ್ದಮೆ ಹೂಡಿದ್ದೇವೆ. ಸಿಐಡಿ ವರದಿ ಇನ್ನೂ ತನಿಖೆಯಲ್ಲಿರುವುದರಿಂದ ಅದನ್ನು ಯಾವರೀತಿ ಇದೆ ಎಂದು ಸಧ್ಯಕ್ಕೆ ತಮ್ಮ ಮುಂದೆ ಹೇಳುವುದಿಲ್ಲ, ಅದೆಲ್ಲಾ ಆದನಂತರ ಅದರ ಬಗ್ಗೆ ಸಿಐಡಿ ವರದಿ ಏನಿದೆ ಎಂಬುದನ್ನು ಸದನಕ್ಕೆ ಬೇಕಾದರೆ ತಿಳಿಸುತ್ತೇನೆ. ಮಾರ್ಚ್ ೬-೭-೮-೯ನೇ ತಾರೀಖು ನಡೆದಿರತಕ್ಕಂತಹ ಬೆಂಕಿ ಅನಾಹುತ ಅಷ್ಟು ಆಗಿಲ್ಲ. ಅದನ್ನು ತಡೆಗಟ್ಟಿ ಮುಂದೆ ಬೆಂಕಿ ಬೀಳದ ರೀತಿಯಲ್ಲಿ ಎಲ್ಲಾ ವ್ಯವಸ್ಥೆ ಮಾಡಿದ್ದೇವೆ. ಈಗ ಸಧ್ಯಕ್ಕೆ ಬೆಂಕಿ ನಿಂತಿದೆ. ೯ನೇ ತಾರೀಖು ಆದ ನಂತರ ಯಾವುದೇ ಅರಣ್ಯದಲ್ಲಿ ಬೆಂಕಿ ಬಿದ್ದಿಲ್ಲವೆಂದು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಸಿ.ಐ.ಡಿ. ವರದಿ ಬಂದಿದೆ ಎಂದು ಮಾನ್ಯ ಸಚಿವರು ಹೇಳಿದರು. ಆ ವರದಿ ಏನು ಏನು ಎಂಬುದನ್ನು ತಿಳಿಸಬೇಕು. ಇವರಲ್ಲಿ ತಪ್ಪಿತಸ್ಥರು ಯಾರು ಎಂಬುದನ್ನು ತಿಳಿಸಬೇಕು. ನನಗೆ ತಿಳಿದಮಟ್ಟಿಗೆ ವೀರರಾಜಪೇಟೆ ನ್ಯಾಯಾಲಯದಲ್ಲಿ ಯಾರು ತಪ್ಪಿತಸ್ಥರು ಇದ್ದರು ಅವರೆಲ್ಲಾ ಬಿಡುಗಡೆಯಾಗಿದ್ದಾರೆಂಬ ವರ್ತಮಾನ ಇದೆ. ಆದ್ದರಿಂದ ಯಾರು ತಪ್ಪಿತಸ್ಥರು ಏನು ಏನ್ನುವುದನ್ನು ಈ ಸದನ ಮುಂಗಿಯುವುದರೊಳಗಾಗಿ ತಿಳಿಸುತ್ತೀರಾ ಹಾಗೂ ವರದಿ ಏನಾಗಿದೆ ಎಂಬುದನ್ನು ಈ ಸದನಕ್ಕೆ ತಿಳಿಸುತ್ತೀರಾ ಎಂದು ನಾನು ತಮ್ಮಲ್ಲಿ ಕಳಕಳಿಯಿಂದ ವಿನಂತಿಸುತ್ತೇನೆ.

ಶ್ರೀ ಎಂ. ಪಿ. ಕೇಶವಮೂರ್ತಿ.—ಶೂನ್ಯ ವೇಳೆಯಲ್ಲಿ ಎಲ್ಲಾ ವಿವರ ಕೊಡುವುದು ಕಷ್ಟವಾಗುತ್ತದೆ. ತಾವು ಪ್ರತ್ಯೇಕವಾಗಿ ಪ್ರಶ್ನೆ ಕೇಳುವುದಾದರೆ ನಾನು ಸಿ.ಐ.ಡಿ. ವರದಿ ತರಿಸಿ ಅದನ್ನು ನೋಡಿ ಮಾಹಿತಿ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—೯ರದ್ದು ಸಿ.ಐ.ಡಿ. ವರದಿ ಬಂದಿದೆ.

ಉಪಾಧ್ಯಕ್ಷರು.—ಮಾನ್ಯ ವಾಟಾಳ್ ನಾಗರಾಜ್‌ರವರೇ, ಮಾನ್ಯ ಸಚಿವರು ಹೇಳುವುದು ಸಿ.ಐ.ಡಿ ವರದಿ ಬಂದಿದೆ ಇದಕ್ಕೆ ಸರಿಯಾದ ಕ್ರಮ ತೆಗೆದುಕೊಂಡಿದ್ದೇವೆ. ಸಿ.ಐ.ಡಿ. ವರದಿಯನ್ನು ಮತ್ತೊಮೆ ಪರಿಶೀಲಿಸಿ ಮುಂದಿನ ಕ್ರಮ ಕೈಗೊಂಡ ಬಗ್ಗೆ ಈ ಸದನಕ್ಕೆ ತಿಳಿಸುತ್ತೇವೆಂದು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಸಚಿವರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಸಿ.ಐ.ಡಿ ವರದಿ ಕೆಲವರನ್ನು ತಪ್ಪಿತಸ್ಥರು ಎಂದು ಹೇಳಿದ್ದಾರೆಂದು ಹೇಳಿದಿರಿ. ಅಲ್ಲಿಗೆ ವರದಿಯನ್ನು ಸಂಪೂರ್ಣವಾಗಿ ಅಭ್ಯಾಸ ಮಾಡಿದ್ದಾರೆಂದಾಯಿತು. ವರದಿ ಏನು ಕೊಟ್ಟಿದೆ ಎಂಬುದನ್ನು ಸ್ವಲ್ಪ ಮೇಲುನೋಟಕ್ಕೆ ತಿಳಿಸಿದಿರಿ. ಆ ವರದಿ ಏನು ಎನ್ನುವುದನ್ನು ಹಾಗೂ ಸಂಪೂರ್ಣವಾಗಿ ಯಾರ್ಯಾರ ಮೇಲೆ ಶಿಕ್ಷೆಯಾಗಿದೆ ಏನೇನು ಕಾರಣ ಎಂಬುದನ್ನು ತಿಳಿಸಬೇಕು. ಏಕೆಂದರೆ ೯ರ ಬೆಂಕಿ ಪ್ರಕರಣ ಅತ್ಯಂತ ಗಂಭೀರವಾದ ಪರಿಸ್ಥಿತಿ ಎನ್ನುವುದನ್ನು ನಾವು ನೀವೆಲ್ಲಾ ಒಪ್ಪಿವ್ದೇವೆ. ಆ ಸಿ.ಐ.ಡಿ. ವರದಿ ಏನು ಎನ್ನುವುದನ್ನು ತಿಳಿಸುವುದಕ್ಕೆ ಏನು ಕಷ್ಟ ಇದೆ ? ಆದನ್ನು ಬಹಿರಂಗ ಪಡಿಸಬಹುದು ಯಾರ್ಯಾರು ತಪ್ಪಿತಸ್ಥರು ಇದ್ದಾರೆ ಅವರ ಮೇಲೆ ಕ್ರಮವೇನು ತೆಗೆದುಕೊಂಡಿದ್ದೀರಿ ? ಆ ವರದಿಯ ಆಧಾರದ ಮೇಲೆ ನೀವೇನು ಕ್ರಮ ಕೈಗೊಳ್ಳತಕ್ಕಂತಹ ವ್ಯವಸ್ಥೆ ಮಾಡಿದ್ದೀರಿ ಆಷ್ಟು ಹೇಳಿದರೆ ಸಾಕು